Starting of University of Medical Science

316. Sri C. K. MOHAMED SAIFUDDIN (Chitradurga).—

Will the Minister for Health be pleased to state :—

(*a*) whether there is any proposal before Government for starting a separate University of Medical Sciences on the lines of the University of Agricultural Sciences in the State ;

(*b*) if so, whether it is intended to be located in a central place in the State like Chitradurga ?

Sri H. SIDDAVEERAPPA (Minister for Health).—

(*a*) No.

(*b*) Does not arise in view of reply to clause (*a*).

Sri C. K. MOHAMED SAIFUDDIN.—The Hon'ble Minister has replied that there is no proposal to start a separate University of Medical Sciences. I would like to draw the attention of the Minister to the fact that we are having 9 Medical Colleges in the State. Along with it, we are having 2 Dental Colleges, 2 Pharmacy Colleges and 2 Nursing Colleges. So, it is not high time that we should think of starting a Medical University in the interest of the Department ?

†Sri H. SIDDAVEERAPPA.—I have not examined that aspect. I will have to consider it.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಶಿವಮೊಗ್ಗಕ್ಕೆ ಬಂದಿದ್ದಾಗ ಅಲ್ಲಿ ಮೆಡಿಕಲ್ ಕಾನ್‌ಫರೆನ್ಸ್ ಅಡ್ರೆಸ್ ಮಾಡಿದಿರಿ. ಅಲ್ಲಿ ಎಲ್ಲಾ ರಾಜ್ಯದ ವೈದ್ಯರುಗಳು ಒಂದು ಮೆಡಿಕಲ್ ಸೈನ್ಸ್ ಯೂನಿವರ್ಸಿಟಿ ಆರಂಭ ಮಾಡಬೇಕು ಎಂದು ಮೂರು ತಿಂಗಳ ಹಿಂದೆ ಸಲಹೆ ಕೊಟ್ಟಿದ್ದರು. ಆ ಬಗ್ಗೆ ಇಷ್ಟು ಸುದೀರ್ಘವಾದ ಕಾಲ ತೆಗೆದುಕೊಂಡರು. ತಾವು ಒಂದು ನಿರ್ಧಾರಕ್ಕೆ ಬರದೇ ಇರುವುದು ಸರಿಯೇ ? ಅದರ ಬಗ್ಗೆ ಶೀಘ್ರ ನಿರ್ಧಾರ ತೆಗೆದುಕೊಂಡು ಆ ಸಲಹೆ ಯಾವ ಶಿವಮೊಗ್ಗದಿಂದ ಬಂದಿತ್ತೊ ಆ ಶಿವಮೊಗ್ಗದಲ್ಲೇ ಒಂದು ಮೆಡಿಕಲ್ ಸೈನ್ಸ್ ಯೂನಿವರ್ಸಿಟಿ ಸ್ಥಾರ್ಪ್ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ಸಿದ್ದವೀರಪ್ಪ.— ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆಯೇ, ಇಲ್ಲವೇ ಮೊದಲು ಯೋಚನೆ ಮಾಡಬೇಕು. ಈ ಎಲ್ಲರೂ ಯೂನಿವರ್ಸಿಟಿ ಪ್ರಾರಂಭ ಮಾಡಬೇಕೆಂದು ಕೇಳುವುದು ಇದು ಒಂದು ಹವ್ಯಾಸವಾಗಿ ಹೋಗಿದೆ. ಇದರ ಔಚಿತ್ಯ ನೋಡಿಕೊಂಡು ಮಾಡಬೇಕಾಗುತ್ತದೆ. ಪರ್ಸ್ ಎಷ್ಟು ಇದೆ ಅದನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಅದುಧರಿಂದ ಇದರ ಔಚಿತ್ಯ ನೋಡಬೇಕು, ಕೇಂದ್ರ ಸರ್ಕಾರದ ಅಭಿಪ್ರಾಯ ಏನು ಇದೆ ಅದನ್ನೆಲ್ಲಾ ತಿಳಿದುಕೊಂಡು ಮುಂದುವರಿಯಬೇಕಾಗುತ್ತದೆ. ಅದನ್ನು ನೋಡಿ ವಿಚಾರ ಮಾಡೋಣ.

ಶ್ರೀ ಟಿ. ಎಂ. ಮಂಜುನಾಥ್.—ಆಯುರ್ವೇದ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಯೋಚಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ನಮ್ಮ ದೇಶದಲ್ಲಿ ಎಲ್ಲಿ ಇದೆಯೋ ಗೊತ್ತಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಹೇಳಬೇಕು. ಆಯುರ್ವೇದ ಕಾಲೇಜುಗಳು ಮತ್ತು ಆಯುರ್ವೇದದ ಬಗ್ಗೆ ವಿಶೇಷ ಪ್ರೋತ್ಸಾಹ ಕೊಡಬೇಕು ಎನ್ನುವ ದೃಷ್ಟಿಯಿಂದ ಸಪರೇಟ್ ಡೈರೆಕ್ಟರೇಟ್ ತೆಗೆಯಲಿಕ್ಕೆ ಈಗಾಗಲೇ ತೀರ್ಮಾನ ಕೈಕೊಂಡಿದ್ದೇವೆ. ಡಾಕ್ಟರ್ ವೇಲುಕೋಟಿಯವರ ಅಧ್ಯತೆಯಲ್ಲಿ ಒಂದು ಉನ್ನತಮಟ್ಟದ ಸಮಿತಿಯನ್ನು ನೇಮಿಸಿದ್ದೇವೆ. ಅವರು ಯಾವರೀತಿ ಸಲಹೆ

(ಶ್ರೀ ಎಚ್. ಸಿದ್ದವೀರಪ್ಪ)

ಕೊಡುತ್ತಾರೆ ಎನ್ನುವುದನ್ನು ನೋಡಬೇಕು. ಆಯುರ್ವೇದ, ಅಲೋಪತಿ, ಯೂನಾನಿ ನೇಚರ್‌ಕ್ಯೂರೋಪತಿ ಬಗ್ಗೆ ವಿಶೇಷ ಸ್ಥಾನ ಕೊಟ್ಟು ಇದನ್ನು ಬದಲಾಯಿಸಬೇಕು ಎನ್ನುವುದ ಸರ್ಕಾರದ ಏರ್ಪಾಡು.

ಶ್ರೀ ಎಸ್. ಪೈ. ಪಾಟೀಲ್.—ಅಲೋಪತಿಗೆ ಯೂನಿವರ್ಸಿಟಿ ಬೇಕಾಗುತ್ತದೆ. ಆಯುರ್ವೇದಕ್ಕೆ ಯೂನಿವರ್ಸಿಟಿ ಬೇಡವೆ ?

ಶ್ರೀ ಎಚ್. ಸಿದ್ದವೀರಪ್ಪ.—ಕಾಲೇಜುಗಳೇ ಸರಿಯಾಗಿ ಇಲ್ಲ, ಯೂನಿವರ್ಸಿಟಿಗೆ ಏತಕ್ಕೆ ಹೋಗೋಣ? ಈಗ ಇರತಕ್ಕ ಕಾಲೇಜುಗಳು ಸರಿಯಾಗಿ ನಡೆಯಬೇಕು, ಆಯುರ್ವೇದ ಕಾಲೇಜು ಸರಿಯಾಗಿ ನಡೆಯಬೇಕು, ಅವು ಸರಿಯಾಗಿ ನಡೆಯುವವರೆಗೂ ಆಯುರ್ವೇದ ಯೂನಿವರ್ಸಿಟಿ ಏತಕ್ಕೆ ತೆಗೆಯೋಣ ? ಯೂನಿವರ್ಸಿಟಿ ತೆಗೆಯತಕ್ಕ ಮಟ್ಟಕ್ಕೆ ಇನ್ನು ಹೋಗಿಲ್ಲ.

ಶ್ರೀ ಸಿ. ಕೆ. ಮೊಹಮದ್ ಸೈಫುದ್ದೀನ್.—ಮೈಸೂರು ಯುನಾನಿ ಕಾಲೇಜ್ ಬಂದ್ ಆಗಿದೆ ಯೆಂದು ತಿಳಿದುಬಂದಿದೆ. ಇದು ನಿಜವೇ ?

ಶ್ರೀ ಎಚ್. ಸಿದ್ದವೀರಪ್ಪ.—ಯುನಾನಿ ಕಾಲೇಜ್ ಬಂದ್ ಆಗಿಲ್ಲ, ಆಯುರ್ವೇದ ಕಾಲೇಜಿನಲ್ಲಿ ಯುನಾನಿ ಇದೆ. ಯುನಾನಿ ಕಾಲೇಜ್ ವರದಿ ಪ್ರಕಾರ ಸೇರತಕ್ಕವರ ಸಂಖ್ಯೆ ಕಡಿಮೆಯಾಗಿದೆ. ಹೆಚ್ಚು ಸೇರತಕ್ಕವರ ಸಂಖ್ಯೆ ಕಂಡುಬಂದಲ್ಲ, ಅಲ್ಲಿ ಕನಿಷ್ಠ ಎಷ್ಟು ವಿದ್ಯಾರ್ಥಿಗಳು ಇರಬೇಕೋ ಅಷ್ಟು ವಿದ್ಯಾರ್ಥಿಗಳು ಸೇರಿದರೆ, ಈಗಲೂ ಸಹ ಸಂಬಂಧಪಟ್ಟ ಏನು ಏನು ಸ್ಟಾಫ್ ಬೇಕೋ ಅದನ್ನು ಸರ್ಕಾರದವರು ಅಪಾಯಿಂಟ್ ಮಾಡುತ್ತೇವೆ.

ಶ್ರೀ ಸಿ. ಕೆ. ಮೊಹಮದ್ ಸೈಫುದ್ದೀನ್.—ಅಲ್ಲಿ ಸ್ಟಾಫ್ ಇಲ್ಲ, ಕಾಲೇಜು ಕ್ಲೋಸ್ ಆಗಿದೆ ಎಂದು ಕೇಳಿದ್ದೇವೆ, ಇದು ನಿಜವೇ ?

ಶ್ರೀ ಎಚ್. ಸಿದ್ಧವೀರಪ್ಪ.—ನನಗೆ ತಿಳಿದುಬಂದಿರುವ ಪ್ರಕಾರ ಯುನಾನಿಗೆ 3 ಅಪ್ಲಿಕೇಷನ್ ಇತ್ತು, ಈಚೆಗೆ ಅವರು ಆಯುರ್ವೇದಕ್ಕೆ ಸೇರಿಕೊಂಡಿರಬಹುದು. ಯುನಾನಿಗೆ ಪ್ರೊಪೋಸಲ್ ಮಾಡಬೇಕು ಆಯುರ್ವೇದಕ್ಕೆ ಎಷ್ಟು ಮುನ್ನಣಿ ಕೊಡುತ್ತೇವೆಯೋ ಅಷ್ಟೇ ಯುನಾನಿಗೂ ಮುನ್ನಣಿ ಕೊಡಬೇಕು ಎಂದು ಸರ್ಕಾರದ ಉದ್ದೇಶ ಇದೆ, ಮುಂದೆ ಹೆಚ್ಚಿನ ಸಂಖ್ಯೆಯಲ್ಲಿ ಬಂದರೆ ಸಪರೇಟ್ ಒಂದು ಸೆಕ್ಷನ್ ಓಪನ್ ಮಾಡುವಕ್ಕೆ ಪ್ರಯತ್ನ ಮಾಡುತ್ತೇವೆ.

Lease of Area in Sandur Taluk to a Mining Company

336. **Sri H. D. DEVEGOWDA** (Holenarasipura).—

Will the Minister for Industries be pleased to state:—

(*a*) whether an area of 19 sq. miles in Sandur Taluk consisting of Manganese and Iron ore deposits has been leased out to a Mining Company ;

(*b*) if so, the name of the Company and the Directors of the Company ;

(*c*) whether this area which is over and above the ceiling limit fixed under the Mineral Concession rules, is leassed out on the specific condition of establishing a Ferro Manganese plant ;

(*d*) if so, whether a plant has been established within the stipulated period ;

(*e*) if not, the action taken by the Governor in the matter ?